ಕರ್ನಾಟಕ ವಿಧಾನಸಭೆ

ಗುರುವಾರ 13ನೇ ಏಪ್ರಿಲ್ 2000ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ

ಸಭಾಂಗಣದಲ್ಲಿ ಬೆಳಿಗ್ಗೆ 10-20 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ಎಂ. ವಿ. ವೆಂಕಟಪ್ಪ) ಅವರು,

ಪೀಠವನ್ನು ಅಲಂಕರಿಸಿದ್ದರು.

1. ಪ್ರಶ್ನೋತ್ತರಗಳು

ಅ) ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ಚಿಕ್ಕಮಗಳೂರು ಜಿಲ್ಲೆಯಲ್ಲಿನ ಹಿಂದುಳಿದ ವರ್ಗಗಳ (ಬಿ. ಸಿ. ಎಂ) ವಸತಿ ನಿಲಯಗಳ ಕುರಿತು

196 (1882) : ಶ್ರೀ ಬಿ. ಆರ್. ನೀಲಕಂಠಪ್ಪ (ತರೀಕೆರೆ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿನ ಹಿಂದುಳಿದ ವರ್ಗಗಳ (ಬಿಸಿಎಂ) ವಸತಿ ನಿಲಯಗಳ ಸಂಖ್ಯೆ ಎಷ್ಟು?

(ಆ) 1998-99ನೇ, 1999-2000ನೇ ಸಾಲುಗಳಲ್ಲಿ ಈ ವಸತಿ ನಿಲಯಗಳಿಗೆ ಬಿಡುಗಡೆಯಾದ ಹಣವೆಷ್ಟು? ಜಿಲ್ಲೆಯಲ್ಲಿ ಅತ್ಯವಶ್ಯಕವಾಗಿ ಬಿಸಿಎಂ ಹಾಸ್ಟೆಲುಗಳು ಬೇಕಾಗಿರುವ ಬಗ್ಗೆ ಜಿಲ್ಲಾ ಪಂಚಾಯತ್‌ನಿಂದ ಶಿಫಾರಸ್ಸು ಆಗಿರುವ ಸಂಖ್ಯೆ ಎಷ್ಟು? ತಾಲ್ಲೂಕುವಾರು ವಿವರ ತಿಳಿಸುವುದು.

(ಇ) ಚಿಕ್ಕಮಗಳೂರು ಜಿಲ್ಲೆಗೆ ಅತ್ಯವಶ್ಯಕವಾಗಿ ಇನ್ನು ಎಷ್ಟು ಹಿಂದುಳಿದ ವರ್ಗಗಳ ವಿದ್ಯಾರ್ಥಿನಿಲಯಗಳ ಕೊರತೆ ಇದೆ?

(ಈ) ಈ ಬಗ್ಗೆ ಜಿಲ್ಲಾ ಪಂಚಾಯತ್‌ನವರು ಶಿಫಾರಸ್ಸು ಮಾಡಿರುವುದು ನಿಜವೇ?

(ಉ) ಜಿಲ್ಲೆಯಲ್ಲಿನ ಬಾಲಕರ ಮತ್ತು ಬಾಲಕಿಯರ ಹಾಸ್ಟೆಲುಗಳ ಸಂಖ್ಯೆ ಎಷ್ಟು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

(ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ 47 ಮೆಟ್ರಿಕ್ ಪೂರ್ವ ಹಾಗೂ 8 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ನಿರ್ವಹಿಸಲಾಗುತ್ತಿದೆ.

(ಆ) ಚಿಕ್ಕಮಗಳೂರು ಜಿಲ್ಲೆಯಲ್ಲಿನ ವಿದ್ಯಾರ್ಥಿನಿಲಯಗಳಿಗೆ 1998-99ನೇ ಸಾಲಿನಲ್ಲಿ ರೂ. 269.65 ಲಕ್ಷಗಳನ್ನು ಹಾಗೂ 1999-2000ನೇ ಸಾಲಿನಲ್ಲಿ ರೂ. 325.90 ಲಕ್ಷ ಹಣ ಬಿಡುಗಡೆಯಾಗಿರುತ್ತದೆ. ಜಿಲ್ಲೆಯಲ್ಲಿ ಇನ್ನು 4 ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಲು ಜಿಲ್ಲಾ ಪಂಚಾಯತ್‌ನಿಂದ ಶಿಫಾರಸ್ಸು ಬಂದಿದೆ. ವಿವರ ಈ ಕೆಳಕಂಡಂತಿರುತ್ತದೆ.

(ಇ)

1. ಮೆಟ್ರಿಕ್ ನಂತರದ ಬಾಲಕರ ನಿಲಯ, ಕೊಪ್ಪ ಟೌನ್
2. ಮೆಟ್ರಿಕ್ ನಂತರದ ಬಾಲಕರ ನಿಲಯ, ಚಿಕ್ಕಮಗಳೂರು (ವೃತ್ತಿಪರ).
3. ಮೆಟ್ರಿಕ್ ಪೂರ್ವ ಬಾಲಕರ ನಿಲಯ, ಮಳಲೂರು, ಚಿಕ್ಕಮಗಳೂರು ತಾಲ್ಲೂಕು.
4. ಮೆಟ್ರಿಕ್ ಪೂರ್ವ ಬಾಲಕಿಯರ ನಿಲಯ, ಲಕ್ಕವಳ್ಳಿ, ತರೀಕೆರೆ ತಾಲ್ಲೂಕು.

(ಉ) ಜಿಲ್ಲೆಯಲ್ಲಿ 43 ಬಾಲಕರ ಹಾಗೂ 12 ಬಾಲಕಿಯರ ವಿದ್ಯಾರ್ಥಿ ನಿಲಯಗಳಿರುತ್ತದೆ.

ಶ್ರೀ ಬಿ. ಆರ್. ನೀಲಕಂಠಪ್ಪ : ಮಾನ್ಯ ಅಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಸುಮಾರು ನಾಲ್ಕು ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಇವುಗಳಿಗೆ ಆಡಳಿತ ಮಂಜೂರಾತಿ ದೊರೆತಿಲ್ಲ. ಮತ್ತು ಇವುಗಳಿಗೆ ಹಣದ ಬಿಡುಗಡೆ ಸಹ ಆಗಿಲ್ಲ. ಅದೇ ರೀತಿ ತರೀಕೆರೆಯಲ್ಲಿ ನಾಲ್ಕು ಎಸ್. ಸಿ. / ಎಸ್. ಟಿ. ಹಾಸ್ಟೆಲ್‌ಗಳಿಗೆ ಆಡಳಿತ ಮಂಜೂರಾತಿಗಾಗಿ ಸುಮಾರು ನಾಲ್ಕು ವರ್ಷಗಳಿಂದ ಕೇಳುತ್ತಿದ್ದಾರೆ. ಅದಕ್ಕೆ ದಾನಿಗಳಿಂದ ಎರಡು ಮೂರು ಲಕ್ಷ ಬೆಲೆ ಬಾಳುವ ನಿವೇಶನವನ್ನು ಕೊಡಿಸಿದ್ದೇವೆ. ಆಡಳಿತಾತ್ಮಕ ಮಂಜೂರಾತಿ ದೊರೆಯದೆ ಈ ಕೆಲಸ ಸ್ಥಗಿತವಾಗಿದೆ. ಇದಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ಮಾನ್ಯ ಸಚಿವರು ಕೊಡಿಸಬೇಕು. ಈಗಾಗಲೇ ಹಾಸ್ಟೆಲ್‌ಗಳನ್ನು ಪ್ರಾರಂಭ ಮಾಡಲು ಶಿಫಾರಸ್ಸಾಗಿರುವುದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಮಾರ್ಚ್ 31ರಲ್ಲಿ ಬಿಡುಗಡೆ ಮಾಡಬೇಕಾಗಿರುವ ಹಣದ ಬಗ್ಗೆ ಆ ಹಣವನ್ನು ಬಿಡುಗಡೆ ಮಾಡಲು ನಾವು ಎಲ್ಲಾ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ನನ್ನ ಪ್ರಕಾರ ಆ ಹಣ ಬಿಡುಗಡೆಯಾಗಿದೆಯೆಂದು ತಿಳಿದುಕೊಂಡಿದ್ದೇನೆ. ಒಂದು ವೇಳೆ ಹಣ ಬಿಡುಗಡೆಯಾಗದಿದ್ದರೆ ಅದನ್ನು ಬಿಡುಗಡೆ ಮಾಡಿಸುತ್ತೇನೆ. ಹೊಸ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭ ಮಾಡುವ ವಿಚಾರದಲ್ಲಿ ಜಿಲ್ಲಾ ಪಂಚಾಯಿತಿಯಿಂದ ಶಿಫಾರಸ್ಸು ಬಂದಿದೆ. ಆದರೆ ನಮ್ಮ ಹಣಕಾಸಿನ ದೃಷ್ಟಿಯನ್ನು ಗಮನದಲ್ಲಿ ಇಟ್ಟುಕೊಂಡು ನಾವು ತೀರ್ಮಾನ ಕೈಗೊಳ್ಳುತ್ತೇವೆ. ಮಾನ್ಯ ಸದಸ್ಯರು ಹೇಳಿದಂಥ ವಿಚಾರದಲ್ಲಿ ಹೊಸ ವಿದ್ಯಾರ್ಥಿ ನಿಲಯಗಳನ್ನು ಮಂಜೂರು ಮಾಡುವ ಬಗ್ಗೆ ನಾವು ವಿಶೇಷ ಗಮನವನ್ನು ಹರಿಸುತ್ತೇವೆಂದು ತಿಳಿಸಬಯಸುತ್ತೇನೆ.

ಶ್ರೀ ಬಿ. ಆರ್. ನೀಲಕಂಠಪ್ಪ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಕೆಲವು ಎಸ್. ಸಿ / ಎಸ್. ಟಿ. ಹಾಸ್ಟೆಲ್‌ಗಳಿಗೆ ಮಂಜೂರಾತಿ ದೊರೆತಿದೆ. ಅವುಗಳ ಸಂಖ್ಯೆ ನಾಲ್ಕು ಇದೆ. ಅವುಗಳಿಗೆ ಅಂದಾಜು ನಕ್ಷೆ ಸಹ ಆಗಿದೆ. ಅದಕ್ಕೆ ಹಣವೂ ಇದೆ. ಆದರೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡುವಲ್ಲಿ ಕಳೆದ ಮೂರು ವರ್ಷಗಳಿಂದ ಮುಂದೂಡುತ್ತಿದ್ದಾರೆ. ಈ ನಾಲ್ಕು ಹಾಸ್ಟೆಲ್‌ಗಳು ತರೀಕೆರೆಯಲ್ಲಿದೆ. ಅದಕ್ಕೆ ನಿವೇಶನವನ್ನು ನಾವು ದಾನವಾಗಿ ಕೊಡಿಸಿದ್ದೇವೆ. ತರೀಕೆರೆ, ಅಜ್ಜಂಪುರ, ಅಮ್ಮೇಹಳ್ಳಿ, ಶಿವನಿ ಇಲ್ಲಿ ವಿದ್ಯಾರ್ಥಿ ನಿಲಯ ಪ್ರಾರಂಭ ಮಾಡುವುದಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ಯಾವಾಗ ಕೊಡುತ್ತೀರಿ? ಈ ನಾಲ್ಕು ಹಾಸ್ಟೆಲ್‌ಗಳು

ತರೀಕೆರೆಯಲ್ಲಿದೆ. ಒಂದು ವರ್ಷದಿಂದ ನಿವೇಶನವಿಲ್ಲವೆಂದು ಹೇಳುತ್ತಿದ್ದರು. ನಾವು ಈಗ ದಾನದ ರೂಪದಲ್ಲಿ ನಿವೇಶನಗಳನ್ನು ಕೊಡಿಸಿದ್ದೇವೆ. ತರೀಕೆರೆ, ಅಜ್ಜಂಪುರ, ಆಮ್ಜೇಹಳ್ಳಿ, ಶಿವನಿ ಈ ಕಡೆಗಳಲ್ಲಿ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭ ಮಾಡುವುದಕ್ಕೆ ಆಡಳಿತಾತ್ಮಕ ಮಂಜೂರಾತಿಯನ್ನು ಯಾವಾಗ ಕೊಡುತ್ತೀರಿ?

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಈ ಹಿಂದೆ ಆ ವಿದ್ಯಾರ್ಥಿ ನಿಲಯಗಳು ನಡೆಯುತ್ತಿದ್ದರೆ, ಅದಕ್ಕೆ ಕಟ್ಟಡವನ್ನು ಕಟ್ಟುವುದರ ಬಗ್ಗೆ ನಕ್ಷೆ, ಅಂದಾಜು ಸರ್ಕಾರಕ್ಕೆ ಬಂದಿದ್ದರೆ ಅಗತ್ಯವಾಗಿ ಅದಕ್ಕೆ ಮಂಜೂರಾತಿಯನ್ನು ಕೊಡುತ್ತೇನೆ.

ಬೀದರ್ ಜಿಲ್ಲೆಯಲ್ಲಿ ಒಳಚರಂಡಿ ಹಾಗೂ ಕುಡಿಯುವ ನೀರಿನ ಯೋಜನೆಗಳು

197 (2232) : **ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) :** ಮಾನ್ಯ ನಗರಾಬಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಕರ್ನಾಟಕ ನಗರ ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯು ಬೀದರ್ ಜಿಲ್ಲೆಯಲ್ಲಿ ಎಷ್ಟು ಯೋಜನೆಗಳು ಕಾರ್ಯಗತವಾಗುವ ಅಂಚಿನಲ್ಲಿದೆ ಮತ್ತು ಈ ವರ್ಷ ಎಷ್ಟು ಯೋಜನೆಗಳನ್ನು ತೆಗೆದುಕೊಳ್ಳಲಾಗುವುದು; (ತಾಲ್ಲೂಕುವಾರು ಅಂಕಿ ಅಂಶಗಳನ್ನು ಒದಗಿಸುವುದು).

(ಆ) ಭಾಲ್ಕಿ ತಾಲ್ಲೂಕಿನಲ್ಲಿ ಕುಡಿಯುವ ನೀರಿನ ತೊಂದರೆ ಇದ್ದು ಮಂಡಲಿಯು ಇಲ್ಲಿ ಕುಡಿಯುವ ನೀರಿನ ಯೋಜನೆಗಳನ್ನು ಹೊಸದಾಗಿ ತೆಗೆದುಕೊಳ್ಳಲಿದೆಯೇ;

(ಇ) ಇಲ್ಲದಿದ್ದಲ್ಲಿ ಕಾರಣಗಳೇನು;

(ಈ) ಜಿಲ್ಲೆಯಲ್ಲಿ ಮಂಡಲಿಯು ನೀರಿನ ಯೋಜನೆಗಳಿಗಾಗಿ ವೆಚ್ಚ ಮಾಡುತ್ತಿರುವ ಹಣವೆಷ್ಟು (ಕಳೆದ 5 ವರ್ಷಗಳ ವಿವರಗಳನ್ನು ಒದಗಿಸುವುದು)

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ನಗರಾಭಿವೃದ್ಧಿ ಸಚಿವರು) :

(ಅ) ಬೀದರ್ ಜಿಲ್ಲೆಯಲ್ಲಿ ನಾಲ್ಕು ನಗರ ಪ್ರದೇಶಗಳಲ್ಲಿ ನೀರು ಸರಬರಾಜು ಯೋಜನೆಗಳು ಕ.ನೀ.ಸ.ಮ.ಒ.ಮ. ಯಿಂದ ಕಾರ್ಯಗತಗೊಳಿಸಲಾಗಿದೆ.

1. ಬೀದರ್ ನಗರ
2. ಬಸವ ಕಲ್ಯಾಣ ಪಟ್ಟಣ
3. ಹುಮ್ನಾಬಾದ್ ಪಟ್ಟಣ ಮತ್ತು
4. ಚಿಟಗುಪ್ಪ

ಭಾಲ್ಕಿ ಮತ್ತು ಔರಾದ್ ಪಟ್ಟಣಗಳಿಗೆ ನೀರು ಸರಬರಾಜು ಯೋಜನೆಗಳನ್ನು ತಯಾರಿಸಲಾಗುತ್ತಿದೆ.